ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 516

ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು)

ಉತ್ತರಿಸಬೇಕಾದ ದಿನಾಂಕ : 13.12.2018

ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು

*********

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ಜಲವಿದ್ಯುತ್, ಶಾಖೋತ್ಪನ್ನ, ಪವನಶಕ್ತಿ, ಸೋಲಾರ್ ಹಾಗೂ ಇತರೆ ಮೂಲಗಳಿಂದ ಎಷ್ಟು ಹೆಚ್ಚಿನ ಪ್ರಮಾಣದ ವಿದ್ಯುತ್ (ಯೂನಿಟ್) ಉತ್ಪಾದನೆ ಮಾಡಲಾಗುತ್ತಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ಉತ್ಪಾದನೆಯಾದ ವಿದ್ಯುತ್ತಿನ ಮೂಲವಾರು ವಿವರಗಳು ಕೆಳಕಂಡಂತಿವೆ (ಮಿಲಿಯನ್ ಯೂನಿಟ್‌ಗಳಲ್ಲಿ): |

| ಮೂಲ | 2013-14 | 2014-15 | 2015-16 | 2016-17 | 2017-18 |
|---|---|---|---|---|---|
| ಜಲ ವಿದ್ಯುತ್ | 12670.80 | 12916.70 | 7271.30 | 6696.30 | 7013.20 |
| ಶಾಖೋತ್ಪನ್ನ | 14470.40 | 15412.30 | 16186.70 | 16729.20 | 14408.80 |
| ಅಸಂಪ್ರದಾಯಕ (ಪವನ, ಸೌರ ಮತ್ತು ಇತರೆ ನವೀಕೃತ ಮೂಲಗಳು) | 5924.70 | 6004.90 | 5609.40 | 6977.90 | 9923.50 |
| ಬೃಹತ್ ಸ್ವತಂತ್ರ ಉತ್ಪಾದಕರು | 6371.80 | 6020.80 | 7704.80 | 7408.30 | 5808.60 |
| ಕೇಂದ್ರದಿಂದ ರಾಜ್ಯದ ಪಾಲು | 11969.50 | 14068.80 | 16320.50 | 22937.90 | 23832.40 |
| ಖರೀದಿ | 6479.15 | 5918.11 | 8547.90 | 4880.26 | 3843.14 |
| ಒಟ್ಟು | **57886.00** | **60342.00** | **61641.00** | **65630.00** | **64830.00** |

| | ಪ್ರಶ್ನೆ | ಉತ್ತರ |
|---|---|---|
| ಆ) | ಕಳೆದ 10 ವರ್ಷಗಳಿಂದ ಹೊರ ರಾಜ್ಯಗಳಿಂದ ಸರಬರಾಜು ಮಾಡಿಕೊಳ್ಳುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು; | ಕಳೆದ 10 ವರ್ಷಗಳಿಂದ ಹೊರ ರಾಜ್ಯಗಳಿಂದ ಹಾಗೂ ಅಲ್ಪಾವಧಿ ಮತ್ತು ಮಧ್ಯಮಾವಧಿ ಆಧಾರದಲ್ಲಿ ಸರಬರಾಜು ಮಾಡಿಕೊಳ್ಳುತ್ತಿರುವ ವಿದ್ಯುತ್ ಪ್ರಮಾಣದ ವಿವರಗಳು ಕೆಳಕಂಡಂತಿವೆ (ಮಿಲಿಯನ್ ಯೂನಿಟ್‌ಗಳಲ್ಲಿ): |

| ವರ್ಷ | ಖರೀದಿಸಲಾದ ವಿದ್ಯುತ್ ಪ್ರಮಾಣ (ಮಿಲಿಯನ್ ಯೂನಿಟ್) |
|---|---|
| 2008-09 | 1963.5 |
| 2009-10 | 1798.65 |
| 2010-11 | 7814.67 |
| 2011-12 | 6319.61 |
| 2012-13 | 11046.35 |
| 2013-14 | 6479.15 |
| 2014-15 | 5918.11 |
| 2015-16 | 8547.9 |
| 2016-17 | 4880.26 |
| 2017-18 | 3843.14 |

| | ಪ್ರಶ್ನೆ | ಉತ್ತರ |
|---|---|---|
| ಇ) | ಬೆಂಗಳೂರು ನಗರ ಜಿಲ್ಲೆಯ ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಸ್ತುತ ವಿದ್ಯುತ್ ಪ್ರಮಾಣದ ಬೇಡಿಕೆ ಎಷ್ಟಿದೆ; ಕೈಗಾರಿಕಾ ಪ್ರದೇಶಗಳಿಗೆ ಎಷ್ಟು; ವಸತಿಯೇತರ ಪ್ರದೇಶಗಳಿಗೆ ಎಷ್ಟು (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನಗರ ಜಿಲ್ಲೆಯ ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಸಕ್ತ ವರ್ಷದಲ್ಲಿ 2837 ಮೆಗಾವ್ಯಾಟ್, ಗರಿಷ್ಟ ಬೇಡಿಕೆ ದಾಖಲಾಗಿದ್ದು, ಮುಂಬರುವ ದಿನಗಳಲ್ಲಿ 2800–2950 ಮೆಗಾವ್ಯಾಟ್‌ಗಳಿಗೆ ಏರಿಕೆಯಾಗಬಹುದೆಂದು ಅಂದಾಜಿಸಲಾಗಿದೆ. ಹಾಗೂ ದಿನವಹಿ ಬೆಂಗಳೂರು ನಗರ ಜಿಲ್ಲೆಯ ಬಿಬಿಎಂಪಿ ವ್ಯಾಪ್ತಿಯಲ್ಲಿ 43 ರಿಂದ 48 ಮಿಲಿಯನ್ ಯೂನಿಟ್ ಬಳಕೆಯನ್ನು ಅಂದಾಜಿಸಲಾಗಿದೆ. ಜಕಾತಿವಾರು ಬಳಕೆಯ ಶೇಕಡಾವಾರು ವಿವರಗಳು ಕೆಳಕಂಡಂತಿದೆ: |

| ಕ್ರಮ ಸಂಖ್ಯೆ | ಜಕಾತಿ ವರ್ಗ | ಶೇಕಡಾ ಬಳಕೆ ಪ್ರಮಾಣ |
|---|---|---|
| 1 | ಗೃಹ ಬಳಕೆ | 40 % |
| 2 | ವಾಣಿಜ್ಯ | 30 % |
| 3 | ಕೈಗಾರಿಕೆ | 21 % |
| 4 | ಕೃಷಿ ಪಂಪ್‌ಸೆಟ್ | 0.6 % |
| 5 | ಬೀದಿ ದೀಪ | 2 % |
| 6 | ಕುಡಿಯುವ ನೀರು | 3.4 % |
| 7 | ತಾತ್ಕಾಲಿಕ ಸ್ಥಾವರಗಳು | 3 % |
| | ಒಟ್ಟು | 100 % |

....2)

| | | |
|---|---|---|
| ಈ) | ಮುಂದಿನ ದಿನಗಳಲ್ಲಿ ಎಷ್ಟು ವಿದ್ಯುತ್ ಪೂರೈಕೆ ಅಗತ್ಯವಿದೆ. ಅಗತ್ಯತೆಗೆ ತಕ್ಕಂತೆ ವಿದ್ಯುತ್ ಉತ್ಪಾದನೆಗೆ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ಪ್ರಸ್ತುತ ದಿನವಹಿ ಸರಾಸರಿ ವಿದ್ಯುತ್ ಬಳಕೆ ಪ್ರಮಾಣವು 208 ಮಿಲಿಯನ್ ಯೂನಿಟ್‌ಗಳಾಗಿದ್ದು, ಮುಂಬರುವ ಬೇಸಿಗೆ ಹಾಗೂ ಪರೀಕ್ಷಾ ಸಮಯದಲ್ಲಿ 238 ಮಿಲಿಯನ್ ಯೂನಿಟ್‌ಗಳಿಗೆ ಏರಿಕೆಯಾಗಬಹುದೆಂದು ಅಂದಾಜಿಸಲಾಗಿದೆ. ಕೇಂದ್ರ ಘಟಕಗಳಿಂದ ಮತ್ತು ರಾಜ್ಯದ ಆಂತರಿಕ ಮೂಲದ ವಿದ್ಯುತ್ ಘಟಕಗಳಿಂದ ಘೋಷಣೆಯಂತೆ ವಿದ್ಯುತ್ ಲಭ್ಯವಾದಲ್ಲಿ ಯಾವುದೇ ಕೊರತೆಯಿಲ್ಲದೆ ವಿದ್ಯುತ್ ಸರಬರಾಜು ಮಾಡಬಹುದಾಗಿದೆ.<br><br>ರಾಜ್ಯದ ವಿದ್ಯುತ್ ಬೇಡಿಕೆಯು ವರ್ಷವಾರು ಸುಮಾರು 600-750 ಮೆಗಾವ್ಯಾಟ್‌ಗಳಷ್ಟು ಏರಿಕೆಯಾಗುತ್ತಿದೆ. ಏರಿಕೆಯಾಗುವ ವಿದ್ಯುತ್ತನ್ನು ಗಮನಿಸಿ, ಸೌರ ಮತ್ತು ನವೀಕೃತ ಇಂಧನ ಮೂಲಗಳ ವಿದ್ಯುತ್ ಘಟಕಗಳ ಸ್ಥಾಪನೆಗೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ.<br><br>ಪ್ರಸ್ತುತ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಕೈಗೊಂಡಿರುವ ಕ್ರಮಗಳು ಕೆಳಕಂಡಂತಿರುತ್ತವೆ:<br>1. 370 ಮೆಗಾವ್ಯಾಟ್ ಸಾಮರ್ಥ್ಯದ ಯಲಹಂಕ ಅನಿಲ ಆಧಾರಿತ ವಿದ್ಯುತ್ ಯೋಜನೆಯ ಅನುಷ್ಠಾನ.<br>2. 2000 ಮೆಗಾವ್ಯಾಟ್ ಸಾಮರ್ಥ್ಯದ ಪಾವಗಡ ಸೌರ ಪಾರ್ಕಿನಲ್ಲಿ NTPC ವತಿಯಿಂದ 600 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗಳು ಈಗಾಗಲೇ ಅನುಷ್ಠಾನಗೊಂಡಿದ್ದು, ಕ್ರೆಡಲ್ ವತಿಯಿಂದ 1200 ಮೆಗಾವ್ಯಾಟ್ ಸಾಮರ್ಥ್ಯದ ಸೌರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಟೆಂಡರ್ ಮುಖಾಂತರ ಹಂಚಿಕೆ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ ಉಳಿದ 200 ಮೆಗಾವ್ಯಾಟ್ ಸಾಮರ್ಥ್ಯವನ್ನು SECI ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ.<br>3. ಪಾವಗಡ ಸೌರ ಪಾರ್ಕಿನಲ್ಲಿ ಕ್ರೆಡಲ್ ಮುಖಾಂತರ 50 ಮೆಗಾವ್ಯಾಟ್ ಸಾಮರ್ಥ್ಯದ ಸೌರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>4. 43 ತಾಲ್ಲೂಕುಗಳಲ್ಲಿ ತಲಾ 20 ಮೆಗಾವ್ಯಾಟ್‌ಗಳಂತೆ ಒಟ್ಟು 860 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಗಳಡಿ 840 ಮೆಗಾವ್ಯಾಟ್ ಸಾಮರ್ಥ್ಯಕ್ಕೆ ಕ್ರೆಡಲ್ ನಿಂದ ಹಂಚಿಕೆ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |

ಸಂಖ್ಯೆ: ಇಎನ್ 227 ಇಬಿಎಸ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ